**Q.P. Code – 56601**

## ಪ್ರಥಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPA 510) Paper 1.1 – ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಪ್ರಾಚೀನ ಕನ್ನಡ ಸಾಹಿತ್ಯದ ಧಾರ್ಮಿಕ ಹಿನ್ನೆಲೆಗಳನ್ನು ಕುರಿತು ಚರ್ಚಿಸಿ.

2. ಮಧ್ಯಕಾಲೀನ ಕನ್ನಡ ಸಾಹಿತ್ಯ ಪ್ರಕಾರಗಳನ್ನು ಪರಿಚಯಿಸಿ.

3. ವೃಷಭನಾಥನ ಪರಿನಿಷ್ಕ್ರಮಣಕ್ಕೆ ಕಾರಣವೇನು? ವಿಶದಪಡಿಸಿ.

4. ಲಲಿತಾಂಗ–ಸ್ವಯಂ ಪ್ರಭೆಯ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.

5. ಅಕ್ಕಮಹಾದೇವಿ ವಚನಗಳಲ್ಲಿ ಕಾಣಬರುವ ಪ್ರತಿಮಾ ವಿಧಾನವನ್ನು ಕುರಿತು ವಿಚಾರ ಮಾಡಿ.

6. 'ದಯಾಮಿತ್ರ ಶೆಟ್ಟಿಯ ಕತೆ'ಯ ಸ್ವಾರಸ್ಯವನ್ನು ವಿವರಿಸಿ.

7. 'ವಿದ್ಯುಚ್ಚೋರನೆಂಬ ರಿಸಿಯ ಕತೆ'ಯ ಆಶಯವನ್ನು ತಿಳಿಸಿ.

8. ವಿಧುರ ನೀತಿಯ ರಾಜ ತಾಂತ್ರಿಕ ನೆಲೆಗಳನ್ನು ವಿವೇಚಿಸಿ.

9. 'ರಾಮಧಾನ್ಯ ಚರಿತ್ರೆ'ಯಲ್ಲಿ ಪ್ರತಿಪಾದಿತವಾಗಿರುವ ಸಾಮಾಜಿಕ ಮೌಲ್ಯಗಳನ್ನು ಕುರಿತು ಪರಿಶೀಲಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಆಗಮಿಕ–ಲೌಕಿಕ ಕಾವ್ಯ ಪರಂಪರೆ

    (ಆ) ವಚನ ಸಾಹಿತ್ಯದ ಸ್ವರೂಪ

    (ಇ) ವೃಷಭಾಚಲದ ವರ್ಣನೆ

    (ಈ) 'ನೆಲಸುಗೆ ನಿನ್ನ ವಕ್ಷದೊಳಿ ನಿಶ್ಚಲಂ ' ಪದ್ಯದ ಅರ್ಥ

    (ಉ) 'ಧರ್ಮಾಮೃತ'ದಲ್ಲಿ ಮತೀಯತೆ

    (ಊ) ಕನಕದಾಸ

    (ಋ) ಅಕ್ಕಮಹಾದೇವಿಯ ಜೀವನ ವೃತ್ತಾಂತ

    (ಎ) ದುರ್ಯೋಧನ–ಕೃಷ್ಣನ ವಾಗ್ವಾದ

---

**Q.P. Code – 56602**

## ಪ್ರಥಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ ಭಾರತಿ

## (DPA 520) Paper 1.2 – ಭಾಷಾ ವಿಜ್ಞಾನ ಮತ್ತು ಛಂದಸ್ಸು

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಭಾಷೆ ಎಂದರೇನು? ವಿದ್ವಾಂಸರ ವ್ಯಾಖ್ಯಾನಗಳನ್ನು ವಿಶ್ಲೇಷಿಸಿ.

2. ಉಪಭಾಷೆ ಎಂದರೇನು? ಅದರ ಸ್ವರೂಪ ಮತ್ತು ವಿಧಗಳನ್ನು ವಿವರಿಸಿ.

3. ಭಾಷಾ ಪ್ರಮಾಣೀಕರಣದ ಸ್ವರೂಪವನ್ನು ವಿಶದಪಡಿಸಿ.

4. ಕನ್ನಡ ಭಾಷೆಯ ಸಮಕಾಲೀನ ಸಮಸ್ಯೆಗಳನ್ನು ಮತ್ತು ಪರಿಹಾರವನ್ನು ವಿವರಿಸಿ.

5. ಛಂದಸ್ಸಿನ ಇತಿಹಾಸ ಮತ್ತು ಪ್ರಯೋಜನಗಳನ್ನು ವಿವರಿಸಿ.

6. ಕಂದ ಛಂದಸ್ಸಿನ ಲಕ್ಷಣವನ್ನು ಉದಾಹರಣೆ ಸಹಿತ ಬರೆಯಿರಿ.

7. ತ್ರಿಪದಿ ಲಕ್ಷಣವನ್ನು ಉದಾಹರಣೆ ಸಹಿತ ಬರೆದು ಅದರ ಇತಿಹಾಸವನ್ನು ವಿವರಿಸಿ.

8. ಮಹಾ ಛಂದಸ್ಸಿನ ಲಕ್ಷಣ ಮತ್ತು ಸ್ವರೂಪವನ್ನು ವಿವರಿಸಿ.

9. ಮುಕ್ತ ಛಂದಸ್ಸಿನ ವೈಶಿಷ್ಟ್ಯವನ್ನು ವಿಶದಪಡಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಚಂಪಕಮಾಲಾವೃತ್ತ

    (ಆ) ಅಂಶ ಷಟ್ಪದಿ

    (ಇ) ದ್ವಿಭಾಷಿಕತೆ

    (ಈ) ಭಾಷಾಸ್ವೀಕರಣ

    (ಉ) ಭಾಷೆ ಮತ್ತು ರಾಜಕಾರಣ

    (ಊ) ಸರಳ ರಗಳೆ

    (ಋ) ಆಕೃತಿಮಾ

    (ಎ) ಲಯ

---

**Q.P. Code – 56603**

## ಪ್ರಥಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPA 530) Paper 1.3 – ಕನ್ನಡ ಸಾಹಿತ್ಯದ ಹಿನ್ನೆಲೆ, ಪ್ರೇರಣೆ, ಪ್ರಭಾವಗಳು

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಕನ್ನಡ ಸಾಹಿತ್ಯ ಪರಂಪರೆಯು ಬೆಳೆದು ಬಂದ ಬಗೆಯನ್ನು ವಿವರಿಸಿ.

2. ಮಾರ್ಗ ಮತ್ತು ದೇಸಿ ಪ್ರಭೇದಗಳನ್ನು ವಿಶದೀಕರಿಸಿ.

3. ಕನ್ನಡ ಮಹಾಭಾರತಗಳ ಸ್ವರೂಪವನ್ನು ವಿಶದೀಕರಿಸಿ.

4. ವೀರಶೈವ ಧರ್ಮವು ಕನ್ನಡ ಸಾಹಿತ್ಯದ ಮೇಲೆ ಬೀರಿರುವ ಪ್ರಭಾವಗಳ ಕುರಿತು ಬರೆಯಿರಿ.

5. ಪ್ರಭುತ್ವ ಮತ್ತು ಸಾಹಿತ್ಯಕ್ಕೆ ಇರುವ ಸಂಬಂಧಗಳನ್ನು ವಿವರಿಸಿ.

6. ಕನ್ನಡ ಸಾಹಿತ್ಯದ ಮೇಲೆ ಇಂಗ್ಲೀಷ್ ಸಾಹಿತ್ಯದ ಪ್ರಭಾವಗಳನ್ನು ವಿಶ್ಲೇಷಿಸಿ.

7. ಕನ್ನಡ ಸಾಹಿತ್ಯವು ರಾಷ್ಟ್ರೀಯತೆಯ ಕುರಿತು ಪ್ರತಿಕ್ರಿಯಿಸಿದ ಕ್ರಮಗಳನ್ನು ಬರೆಯಿರಿ.

8. ನವೋದಯ ಕಾವ್ಯದ ಸ್ವರೂಪ-ಲಕ್ಷಣಗಳನ್ನು ಕುರಿತು ಬರೆಯಿರಿ.

9. ದಲಿತ-ಬಂಡಾಯ ಕಾವ್ಯಗಳು ಬೆಳೆದು ಬಂದ ಬಗೆಯನ್ನು ವಿಶದೀಕರಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಲೌಕಿಕ-ಆಗಮಿಕ

    (ಆ) ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ

    (ಇ) ಶಿಷ್ಟ-ಪರಿಶಿಷ್ಟ

    (ಈ) ಪಂಪ

    (ಉ) ಪ್ರಗತಿಶೀಲ ಸಾಹಿತ್ಯ

    (ಊ) ಲೋಹಿಯಾವಾದ

    (ಋ) ವೈದಿಕ ಧರ್ಮ

    (ಎ) 'ರಾಮಚಂದ್ರಚರಿತ ಪುರಾಣ'

---

**Q.P. Code – 56604**

## ಪ್ರಥಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPA 540) Paper 1.4.1 – ಜಾನಪದ ವಿಜ್ಞಾನ : ಮೂಲತತ್ವಗಳು ಮತ್ತು ಪ್ರಕಾರಗಳು

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಜನಪದ, ಜಾನಪದ, ಜಾನಪದ ವಿಜ್ಞಾನ ಈ ಪರಿಕಲ್ಪನೆಗಳನ್ನು ವಿವರಿಸಿ.

2. ಆರ್.ಎಸ್. ಬಾಗ್ಸ್ ಅವರ ವರ್ಗೀಕರಣದ ಸ್ವರೂಪವನ್ನು ವಿಶದಪಡಿಸಿ.

3. ಜಾನಪದ ಕ್ಷೇತ್ರ ಕಾರ್ಯದ ಮಹತ್ವವನ್ನು ಬರೆಯಿರಿ.

4. ಜಾನಪದ ಮತ್ತು ಇತಿಹಾಸಗಳ ಸಂಬಂಧವನ್ನು ವಿಶದಪಡಿಸಿ.

5. ಜಾನಪದ ಗದ್ಯ ಪ್ರಕಾರಗಳ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸಿ.

6. ಗಾದೆಗಳ ಲಕ್ಷಣ ಮತ್ತು ಸ್ವರೂಪವನ್ನು ವಿಶದಪಡಿಸಿ.

7. ಜನಪದ ರಂಗಭೂಮಿಯ ಇತಿಹಾಸವನ್ನು ವಿವರಿಸಿ.

8. 'ಆಧುನಿಕ ಕಾಲದಲ್ಲಿಯೂ ಜನಪದ ಜಾತ್ರೆಗಳ, ಆಚರಣೆ ಹೆಚ್ಚುತ್ತಿದೆ' – ಚರ್ಚಿಸಿ.

9. 'ಜನಪದ ನಂಬಿಕೆಗಳೆಲ್ಲವೂ ಮೂಢ ನಂಬಿಕೆಗಳಲ್ಲ' – ಚರ್ಚಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಕ್ಷೇತ್ರ ಕಾರ್ಯದ ಪೂರ್ವಸಿದ್ಧತೆ

    (ಆ) ಜಾನಪದ ಮತ್ತು ಮನೋವಿಜ್ಞಾನ

    (ಇ) ಒಗಟು

    (ಈ) ಜನಪದ ವೃತ್ತಿ ಸಂಬಂಧ ವಸ್ತುಗಳ ವೈಶಿಷ್ಟ್ಯ

    (ಉ) ಜನಪದ ಚಿತ್ರಕಲೆ

    (ಊ) ಶ್ರೀ ಕೃಷ್ಣ ಪಾರಿಜಾತ

    (ಋ) ಹಚ್ಚೆ

    (ಎ) ಮನರಂಜನಾತ್ಮಕ ವಸ್ತುಗಳು

---

**Q.P. Code – 56605**

## ಪ್ರಥಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPA 550) Paper 1.4.2 – ಆಧುನಿಕ ಕನ್ನಡ ಸಾಹಿತ್ಯ : ಕಾವ್ಯ ಮತ್ತು ನಾಟಕ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಆಧುನಿಕ ಕನ್ನಡ ಕಾವ್ಯದ ಸ್ವರೂಪ ಮತ್ತು ಇತಿಹಾಸವನ್ನು ಚರ್ಚಿಸಿ.
2. ನವೋದಯ ಮತ್ತು ನವ್ಯ ಸಾಹಿತ್ಯದ ಗುಣ–ಲಕ್ಷಣಗಳನ್ನು ವಿವೇಚಿಸಿ.
3. ಆಧುನಿಕ ಕನ್ನಡ ನಾಟಕದ ಸ್ವರೂಪವನ್ನು ವಿವರಿಸಿ.
4. 'ಶಿಲಾ ತಪಸ್ವಿನಿ' ಮತ್ತು 'ಮಮತೆಯ ಸುರ ಮಂಥರೆ' ಸಂಚಿಕೆಗಳ ಮಹತ್ವವನ್ನು ಪರಿಶೀಲಿಸಿ.
5. ಕೆ.ಎಸ್. ನರಸಿಂಹಸ್ವಾಮಿ ಅವರ ಕವಿತೆಗಳಲ್ಲಿ ಚಿತ್ರಣಗೊಂಡ ಗಂಡು–ಹೆಣ್ಣಿನ ಸಂಬಂಧಗಳನ್ನು ವಿಶ್ಲೇಷಿಸಿ.
6. ಪ್ರತಿಭಟನೆಯ ಸ್ವರೂಪ ಸಾವಿರಾರು ನದಿಗಳು ಸಂಕಲನದಲ್ಲಿ ಚಿತ್ರಣಗೊಂಡ ಬಗೆಯನ್ನು ವಿಮರ್ಶಿಸಿ.
7. 'ಟೊಳ್ಳು ಗಟ್ಟಿ' ನಾಟಕದ ಮಹತ್ವವನ್ನು ಪರಾಮರ್ಶಿಸಿ.
8. 'ಅಹಲ್ಯ' ನಾಟಕದ ವಸ್ತುವನ್ನು ವಿವೇಚಿಸಿ.
9. ಅಗ್ನಿ ಮತ್ತು ಮಳೆ ನಾಟಕದ ನಿತ್ತಿಲೆ ಮತ್ತು ವಿಶಾಖರ ಪಾತ್ರಗಳನ್ನು ವಿಮರ್ಶಿಸಿ.
10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :
    (ಅ) ದಲಿತ ಕಾವ್ಯ
    (ಆ) ಬಂಡಾಯದ ಸ್ವರೂಪ
    (ಇ) ಹಿರಿಯಣ್ಣ
    (ಈ) 'ಮನೆಯಿಂದ ಮನೆಗೆ'
    (ಉ) ರೈಭ್ಯ
    (ಊ) 'ಕೆಂಪು ಸೂರ್ಯ'
    (ಋ) ಗೌತಮ
    (ಎ) ಭರತ

---